**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ಹುಕ್ಕೇರಿ**

CC No. 1637 /2023
CW-1/ PW- 1

ಹೆಸರು : ಮಹಾದೇವ ಬಸವಂತ ಕಂಕಣವಾಡಿ
ವಯಸ್ಸು : 64 ವರ್ಷ
ಉದ್ಯೋಗ : ನಿವೃತ್ತ ಸೈನಿಕ
ವಾಸಸ್ಥಳ : ಹುಕ್ಕೇರಿ

(ದಿನಾಂಕ 08-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟಿ ಸವಾಲು: ಆರೋಪಿ ಪರ ಶ್ರೀ ಎಂ ಬಿ ಪಿ ವಕೀಲರಿಂದ -**

1. ನಾನು ಬಿ ಎ ಓದಿರುತ್ತೇನೆ. ನನಗೆ 12 ವರ್ಷಗಳಿಂದ ಆರೋಪಿತನ ಪರಿಚಯ ಇರುತ್ತದೆ. ನನಗೆ ಬೆಳಗಾವಿಯ ನೆಹರು ನಗರದಲ್ಲಿ ಬಿಲ್ಡಿಂಗ ಇತ್ತು . ಅದರ ಸಮೀಪ ಮಹೇಶ್ವರಿ ಬ್ರ್ಯಾಂಚ್ ಸ್ಕೂಲ ಇತ್ತು . ಅಲ್ಲಿ ಆರೋಪಿ ಅವರ ಫ್ರೆಂಡ್ಸ ಜೊತೆಗೆ ಬರುತ್ತಿದ್ದರು. ಆ ಮೂಲಕ ಪರಿಚಯ ಆದರು. ಆರೋಪಿಯ ಹೆಂಡತಿ ಹೆಸರು ವಾಣಿ, ಅವರು ಚೆನ್ನಮ್ಮ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಾರೆ. ಆರೋಪಿಯ ಖುದ್ದು ಊರು ಬೈಲಹೊಂಗಲ ತಾಲೂಕು . ಆರೋಪಿಯು ಈಗ ಬೆಳಗಾವಿಯ ಶಾಹುನಗರದದಲ್ಲಿ ವಾಸವಾಗಿದ್ದಾರೆ. ನಾನು ಈಗ ಹುಕ್ಕೇರಿಯಲ್ಲಿದ್ದೇನೆ , ಆರೋಪಿಯು ಬೆಳಗಾವಿಯಲ್ಲಿ ಇದ್ದಾರೆ ಎಂದರೆ ನಿಜ.

2. ಆರೋಪಿಯು ಬೆಳಗಾವಿಯಲ್ಲಿ ಒಂದು ಅಂಗಡಿ ಇಟ್ಟುಕೊಂಡಿದ್ದಾರೆ. ಯಾವ ಅಂಗಡಿ ಎಂದು ನನಗೆ ಗೊತ್ತಿಲ್ಲ. ಬೈಲಹೊಂಗಲದ ಒಂದು ಹಳ್ಳಿಯಲ್ಲಿ ಹೊಲ ಇದೆ. ಆ ಹಳ್ಳಿ ಹೆಸರು ನನಗೆ ಗೊತ್ತಿಲ್ಲ. ಆರೋಪಿಗೆ ವರ್ಷಕ್ಕೆ ಎಷ್ಟು ಇನಕಮ್ ಇದೆ ಎಂದು ನಾನು ಚೌಕಾಶಿ ಮಾಡಿಲ್ಲ. ನಾನು ಅವರ ಹೊಲದ ಬಗ್ಗೆ ಚೌಕಾಶಿ ಮಾಡಿಲ್ಲ.

3. ನಾನು ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ಪೆನಶನ್ ಬರುತ್ತದೆ. ನನಗೆ ತಿಂಗಳಿಗೆ ರೂ.40,000/- ಪೆನಶನ್ ಬರುತ್ತದೆ. ನಾನು ಮೊದಲು ಇನಕಮ್ ಟ್ಯಾಕ್ಸ ಕಟ್ಟುತ್ತಿದೆ. 2018 ರ ತನಕ ಇನಕಮ್ ಟ್ಯಾಕ್ಸ ಫೈಲ ಮಾಡಿದ್ದೇನೆ. ಇನಕಮ್ ಟ್ಯಾಕ್ಸ ಫೈಲ ಮಾಡಿದ ಬಗ್ಗೆ 2018 ರ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಡಬಲ್ಲೆ. ಈಗ ನಾನು ಯಾವುದೇ ಇನಕಮ್ ಟ್ಯಾಕ್ಸ ಫೈಲ ಮಾಡುತ್ತಿಲ್ಲ. ಆರೋಪಿ ತನಗೆ ಅಡಚಣೆ ಇದೆ , 3-4 ತಿಂಗಳಿನಲ್ಲಿ ಹಣ ಕೊಡುತ್ತೇನೆ ಎಂದು 2021 ರಲ್ಲಿ ಹೇಳಿದರು. ನಾನು ದಿನಾಂಕ 18-6-2021 ರಂದು ರೂ. 5,00,000/- ಹಣವನ್ನು ಆರೋಪಿಗೆ ಆರ್ ಟಿ ಜಿ ಎಸ್ ಮಾಡಿರುತ್ತೇನೆ. ಆರೋಪಿ ತನ್ನ ಮನೆಯ ಅಡಚಣೆ ಇದೆ ಎಂದು

ಹೇಳಿದರು. ಏನು ಅಡಚಣೆ ಎಂದು ನಾನು ಕೇಳಲಿಲ್ಲ. 2-3 ತಿಂಗಳಲ್ಲಿ ಕೊಡುತ್ತೇನೆ ಎಂದು ಹೇಳಿದ್ದರು ,ನಾನು ಸುಮ್ಮನಾದೆ. ನನ್ನ ಫಿರಾದಿಯಲ್ಲಿ ಅಡಚಣೆ ಬಗ್ಗೆ ನಮೂದು ಮಾಡಿದ್ದೇನೆ. ಅಡಚಣೆ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

4. ಯಾವ ದಿನಾಂಕದಂದು ಆರೋಪಿಗೆ ಹಣ ಕೊಟ್ಟಿದ್ದೇನೆ ಎಂದು ಫಿರ್ಯಾದಿಯಲ್ಲಿ ಮತ್ತು ನನ್ನ ಸ್ವಪ್ರತಿಜ್ಞಾ ಹೇಳಿಕೆಯಲ್ಲಿ ನಮೂದು ಮಾಡಿದ್ದೇನೆ. ರೂ. 5,00,000/- ಕೊಡುವಷ್ಟು ನಮ್ಮದು ಮತುತ ಅವರದು ಸಂಬಂಧ ಚೆನ್ನಾಗಿತ್ತಾ ಎಂದರೆ ಸಾಕ್ಷಿ ಚೆನ್ನಾಗಿತ್ತು ಎಂದು ಹೇಳುತ್ತಾರೆ. ನಮ್ಮ ಸಂಬಂಧ ಚೆನ್ನಾಗಿತ್ತು ಎಂದು ನಾನು ಫಿರಾದಿಯಲ್ಲಿ ನಮೂದು ಮಾಡಲು ನನಗೆ ಅಡಚಣೆ ಇರಲಿಲ್ಲ. ನಾನು ಬಡ್ಡಿಯಂತೆ ರೂ. 5,00,000/- ಹಣವನ್ನು ಆರೋಪಿಗೆ ಕೊಟ್ಟಿಲ್ಲ.

5. ರೂ. ರೂ. 5,00,000/- ಹಣಕ್ಕೆ 8 % ನಂತೆ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಇಟ್ಟರೆ ವಾರ್ಷಿಕ ರೂ. 40,000/- ಬಡ್ಡಿ ಬರುತ್ತದೆ ಎಂದರೆ ನಿಜ. ನಾನು ಬಡ್ಡಿ ಬರುವಂತೆ ಇದ್ದರೂ ಲುಕ್ಸಾನ ಮಾಡಿಕೊಂಡು ಆರೋಪಿಗೆ ಕೊಟ್ಟಿದ್ದೆಂನೆ ಎಂದರೆ ನಂಬಿಕೆ ಮೇಲೆ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

6. ದಿನಾಂಕ 18-06-2021 ರಂದು ನಾನು ಆರೋಪಿಗೆ ರೂ. 5,00,000/- ಹಣವನ್ನು ಆರ್ ಟಿ ಜಿ ಎಸ್ ಮೂಲಕ ದುಡ್ಡು ಕೊಟ್ಟಿದ್ದೇನೆ. ನಾನು ಯಾವುದೇ ಶರತ್ತು ಇಟ್ಟುಕೊಂಡು ಹಣ ಕೊಟ್ಟಿಲ್ಲ. ಆರೋಪಿಗೆ ಹಣ ಕೊಟ್ಟ ನಂತರ 2022 ರಲ್ಲಿ ಒಂದು ಬಾಂಡ ಬರೆದುಕೊಟ್ಟಿದ್ದಾರೆ. ಬಾಂಡನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ . ಅದನ್ನು ಕೊಡಲು ತೊಂದರೆ ಇರುವುದಿಲ್ಲ. ನಾನು ಬಾಂಡ ಬರೆಸಿಕೊಂಡಿಲ್ಲ , ಆರೋಪಿಯೇ ಅದನ್ನು ಬರೆದು ಕೊಟ್ಟಿದ್ದಾನೆ. ಆ ಬಾಂಡ ಬರೆದು ಕೊಟ್ಟ ಬಗ್ಗೆ ಫಿರ್ಯಾದಿಯಲ್ಲಿ ಬರೆಸಲು ಅಡಚಣೆ ಇರಲಿಲ್ಲ.

7. 18-6-2021 ರಂದು ನಾನು ಆರೋಪಿಗೆ ರೂ. 5,00,000/- ಹಣ ಕೊಟ್ಟಿದ್ದೆ , 2-3 ತಿಂಗಳಲ್ಲಿ ಕೊಡುತ್ತೇನೆ ಎಂದು ಹೇಳಿದ . ಆತನ ಮನೆಗೆ 2-3 ಬಾರಿ ಹೋಗಿ ಬಂದೆ. ಆತ ಮನೆಯಲ್ಲಿ ಸಿಗಲಿಲ್ಲ , ದಿನಾಂಕ 4-5-2022 ರಂದು ಆರೋಪಿಯು ರೂ. 40,000/- ಗಳನ್ನು ಅವರ ಮನೆಯಲ್ಲಿ ಕೊಟ್ಟರು. ಅದೇ ದಿನ ಆರೋಪಿ ನಿ.ಪಿ-1 ರ ಚೆಕ್ಕ ಕೊಟ್ಟಿದ್ದರು. ಅದರಲ್ಲಿ ದಿನಾಂಕವನ್ನು 31-12-2022 ಎಂದು ಅವರೇ ನಮೂದು ಮಾಡಿ ಕೊಟ್ಟಿದ್ದರು. ಅದೇ ದಿನ ಮೇಲೆ ಹೇಳಿದ ಬಾಂಡನ್ನೂ ಸಹ ಬರೆದು ಕೊಟ್ಟರು.

8. ನನ್ನ ಮತ್ತು ಆರೋಪಿಯದು ವ್ಯವಹಾರ (Business )ಇತ್ತು ಎಂದರೆ ಸರಿಯಲ್ಲ. ಆ ಬಿಜಿನೆಸನಲ್ಲಿ ನನ್ನದು ಮತ್ತು ಆರೋಪಿಯದು ಕೂಡತೆಗೆದುಕೊಳ್ಳುವ ವ್ಯವಹಾರ ಇತ್ತು ಎಂದರೆ ಸರಿಯಲ್ಲ. ಆರೋಪಿ ಮತ್ತು ನಾನು ಬೆಳಗಾವಿಯಲ್ಲಿ ವಧು ವರರ ಮಾಹಿತಿ ಕೇಂದ್ರ ನಡೆಸುತ್ತಿದ್ದೆವು

ಎಂದರೆ ಸರಿಯಲ್ಲ. 2022 ಕ್ಕಿಂತ ಮುಂಚೆ ನನ್ನದು ಮತ್ತು ಆರೋಪಿಯದು ಎಲ್ಲಾ ವ್ಯವಹಾರ ಮುಗಿದಿತ್ತು ಎಂದರೆ ಸರಿಯಲ್ಲ. ಅದಕ್ಕಿಂತ ಮುಂಚೆ ನಾನು ನಿ.ಪಿ-1 ರ ಚೆಕ್ಕನ್ನು ಆರೋಪಿಯಿಂದ ಸೆಕ್ಯೂರಿಟಿಗಾಗಿ ತೆಗೆದುಕೊಂಡಿದ್ದೆ ಎಂದರೆ ಸರಿಯಲ್ಲ . ಆರೋಪಿಗೆ ರೂ. 5,00,000/- ಹಣವನ್ನು ಆತ ವಾಸಪ ಕೊಡುವ ಸಾಮರ್ಥ್ಯ ಇದೆಯೋ ಇಲ್ಲವೂ ಎಂದು ತಿಳಿಯದೇ ನಾನು ಕೊಟ್ಟಿದ್ದೆನೆ ಎಂದರೆ ಸಾಕ್ಷಿ ಆತ ಬಿಜಿನೆಸ್ ಮಾಡುತ್ತೇನೆ ಎಂದು ಹೇಳಿದ್ದರಿಂದ ನಾನು ನಂಬಿಕೆ ಮೇಲೆ ಕೊಟ್ಟೆ ಎಂದು ಹೇಳುತ್ತಾರೆ. ನಾನು ಆರೋಪಿ ಕಡೆಯಿಂದ ಖಾಲಿ ಚೆಕ್ಕಿಗೆ ಸಹಿ ಮಾಡಿಸಿಕೊಂಡು ಈ ಕೇಸ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ